ಇಡೀ ಪ್ರಪಂಚದಲ್ಲೇ ಪ್ರಖ್ಯಾತ. ನಾನು ಇಂಗ್ಲೆಂಡಿನಲ್ಲಿದ್ದಾಗ ಆ ನಾಟಕೋತ್ಸವ ನಡೆಯಿತು. ರಂಗಭೂಮಿಯ ಬಗ್ಗೆ ಬಹಳ ಆಸಕ್ತಿ ಇದ್ದುದರಿಂದ ಆ ನಾಟಕೋತ್ಸವ ನೋಡಲು ಕಾತುರನಾಗಿದ್ದೆ. ಕಾರ್ನಾಡರು ಹಾಗು ಅವರ ಕುಟುಂಬಕ್ಕೆ ರಾಯಭಾರದ ಕಡೆಯಿಂದ ನಾಟಕೋತ್ಸವ ನೋಡಲು ವ್ಯವಸ್ಥೆ ಮಾಡಲಾಗಿತ್ತು. ಎಡಿನ್‌ಬರೊ ಊರಿನಲ್ಲಿ ಒಂದು ಪ್ರಸಿದ್ಧ ಹೋಟೆಲ್‌ನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಆಗ ಸಂಜೋಯ್ ರಾಯ್ ಎಂಬುವರು ಭಾರತದ ಸಾಂಸ್ಕೃತಿಕ ತಂಡಗಳ ಮುಖ್ಯ ವ್ಯವಸ್ಥಾಪಕರಾಗಿದ್ದರು. ರಾಯ್ ಅವರ ತಂಡ ಸುಮಾರು ಒಂದು ತಿಂಗಳ ಹಿಂದಿನಿಂದ ಎಡಿನ್‌ಬರೊದಲ್ಲಿ ಒಂದು ಮನೆ ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದರು. ರಾಯ್ ಅವರನ್ನು ಕೇಳಿಕೊಂಡು, ಅವರು ಬಾಡಿಗೆಗೆ ಇದ್ದ ಮನೆಯಲ್ಲಿ ಅವರ ತಂಡದ ಜೊತೆ ನಾನು ಸ್ವಲ್ಪ ದಿನಗಳ ಮಟ್ಟಿಗೆ ಉಳಿದುಕೊಳ್ಳಲು ಕಾರ್ನಾಡರು ಅವಕಾಶ ಮಾಡಿಕೊಟ್ಟರು.

'ಬೆಳಗ್ಗೆ ನಾನು ಉಳಿದುಕೊಂಡಿರುವ ಹೋಟೆಲ್‌ಗೆ ಬಂದ್ಬಿಡಿ. ಇಲ್ಲಿ ಬೆಳಗ್ಗಿನ ತಿಂಡಿಗೆ ದುಡ್ಡು ಕೊಡಬೇಕಿಲ್ಲ. ನಾವು ನಾಲ್ಕು ಜನ ಇದ್ದೀವಿ. ನಾನು ನನ್ನ ಹೆಂಡತಿ ಮಾತ್ರ ಬೇಗ ಬಂದು ತಿಂಡಿ ತಿನ್ನುತ್ತೇವೆ. ನನ್ನ ಮಕ್ಕಳು ಎದ್ದೇಳುವುದು ಸ್ವಲ್ಪ ತಡ ಆಗಬಹುದು. ಅವರ ಬದಲು, ನೀವು ನನ್ನ ಜೊತೆ ತಿಂಡಿ ಮಾಡಿ' ಎಂದು ಹೇಳುತ್ತಾ, 'ಈ ಊರಲ್ಲಿ ಎಲ್ಲ ದುಬಾರಿ. ಇಲ್ಲಿ ಬಂದು ತಿಂಡಿ ಸರಿಯಾಗಿ ಗಡದ್ದಾಗಿ ತಿಂದ್ಬಿಡಿ. ಆಗ ಮಧ್ಯಾಹ್ನ ಹೇಗೋ ಲಘು ಉಪಹಾರ ತಿಂದು ನಿಭಾಯಿಸಬಹುದು' ಎಂದರು. ಹೀಗೆ ಎಡಿನ್‌ಬರೊ ನಾಟಕೋತ್ಸವವನ್ನ ಸುಮಾರು ಹದಿನೈದು ದಿನ ನೋಡಲು ಕಾರ್ನಾಡರು ಅವಕಾಶ ಮಾಡಿಕೊಟ್ಟರು.

> ಓರ್ವ ರಂಗಕರ್ಮಿ ತಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿದಾಗ ಕಾರ್ನಾಡರು ಕೊಟ್ಟ ಉತ್ತರ – ಪ್ರತಿ ವರ್ಷವೂ ಜಾಸ್ತಿ ವಯಸ್ಸಾಗಿಬಿಡುತ್ತೆ. ಇದನ್ನ ಎಲ್ಲರ ಜೊತೆ ಸಂಭ್ರಮಿಸೋದು ಏನಿದೆ?

ಕಾರ್ನಾಡರೊಂದಿಗೆ ನನ್ನದು ಇಪ್ಪತ್ತೆರಡು ವರ್ಷಕ್ಕೂ ಹೆಚ್ಚಿನ ಒಡನಾಟ. 1996ರಲ್ಲಿ ಅವರ ಬಳಿ ಸಹಾಯಕ ನಿರ್ದೇಶಕನಾಗಿ ಕೆಲಸ ಶುರು ಮಾಡಿದೆ. ಅವರೊಂದಿಗೆ ಕೆಲಸ ಮಾಡುತ್ತಾ, ಚರ್ಚಿಸುತ್ತ, ಸದಾ ಕಲಿಯುತ್ತ, ಕಳೆದ ದಿನಗಳು ಅನೇಕ. ಅಷ್ಟೂ ವರ್ಷಗಳಲ್ಲಿ ಅನೇಕರು ನನ್ನ ಬಳಿ, 'ಕಾರ್ನಾಡರು ನಿಷ್ಠುರರು. ಅವರ ಬಳಿ ಹೋಗಲು, ಮಾತಾಡಲು ಭಯವಾಗುತ್ತೆ' ಇತ್ಯಾದಿ ಹೇಳಿರುವುದನ್ನ ನಾನು ಕೇಳಿದ್ದೇನೆ. ಒಮ್ಮೆ ಕಾರ್ನಾಡರಿಗೆ ಹತ್ತಿರವಿದ್ದ ಒಬ್ಬ ರಂಗಕರ್ಮಿ ತಮ್ಮ ಹುಟ್ಟುಹಬ್ಬಕ್ಕೆ ಅವರನ್ನು ಆಹ್ವಾನಿಸಿದರು. ಅದಕ್ಕೆ ಕಾರ್ನಾಡರು ಕೊಟ್ಟ ಉತ್ತರ – 'ನೋಡಿ ಇವರೇ, ಬದುಕಿ ಉಳಿದುಬಿಟ್ಟರೆ ಸಾಕು, ಪ್ರತಿ ವರ್ಷವೂ ಜಾಸ್ತಿ ವಯಸ್ಸಾಗಿಬಿಡುತ್ತೆ. ಇದನ್ನ ಎಲ್ಲರ ಜೊತೆ ಸಂಭ್ರಮಿಸೋದು ಏನಿದೆ?'

ಕಳೆದ ವರ್ಷ ಕಾರ್ನಾಡರಿಗೆ ಎಂಬತ್ತು ವರ್ಷ ದಾಟಿದಾಗ ಅವರ ಕುಟುಂಬದವರು ಹೇಗೋ ಒತ್ತಾಯ ಮಾಡಿ ಒಂದು ಚಿಕ್ಕ ಔತಣವನ್ನು ಏರ್ಪಡಿಸಿದ್ದರು. ಕುಟುಂಬಕ್ಕೆ ಬಹಳ ಆಪ್ತರಾದ ಕೆಲವರನ್ನು ಮಾತ್ರ ಆಹ್ವಾನಿಸಿದ್ದರು. ಈ ರೀತಿಯ ಅಪರೂಪದ ಗಳಿಗೆಗಳನ್ನ ಬಿಟ್ಟರೆ ಬಹಳ ಖಾಸಗಿಯಾಗಿ ಬದುಕಿದ ವ್ಯಕ್ತಿ ಅವರು. ತಾವು ಸತ್ತಾಗ ಯಾವ ರೀತಿಯ ಆಡಂಬರ ಆಗಲಿ, ಜನ ಸೇರುವ ವ್ಯವಸ್ಥೆ ಆಗಲಿ, ಸಾರ್ವಜನಿಕ ಪ್ರದರ್ಶನ ಆಗಲಿ, ಮಾಡಬಾರದು ಎಂದು ತಮ್ಮ ಕುಟುಂಬ ಹಾಗು ಹತ್ತಿರದವರಿಗೆ ಸ್ಪಷ್ಟವಾಗಿ ಹೇಳಿದ್ದರು. ಎಷ್ಟು ವೈಯಕ್ತಿಕವಾಗಿ, ಗಾಂಭೀರ್ಯದಿಂದ ಇದ್ದರೋ, ಹಾಗೆಯೇ ನಮ್ಮನ್ನು ಅಗಲಿದರು.